# ಗಡಿ ದಾಟಿದ ಕನ್ನಡದ ಸಿನಿಮಾಗಳು




## ಪೆದ್ರೊ

ರಿಷಭ್ ಶೆಟ್ಟಿ ನಿರ್ಮಾಣದ 'ಪೆದ್ರೊ' ಸಿನಿಮಾ ಬಗ್ಗೆ ನಟೇಶ್ ಹೆಗಡೆ ನಿರ್ದೇಶನದ, ಬೂಸಾನ್ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರದರ್ಶನ ಹಲವರಿಗೆ ತಿಳಿದಿದ್ದು ಅದು ಒಂದಾದ ಬೂಸಾನ್‌ನಲ್ಲಿ ಪ್ರದರ್ಶನ ಕಂಡಾಗಲೇ. ಜಗತ್ತಿನ ಪ್ರತಿಷ್ಠಿತ ಚಿತ್ರೋತ್ಸವಗಳಲ್ಲಿ ಲಂಡನ್ ಚಿತ್ರೋತ್ಸವದಲ್ಲಿಯೂ ಪ್ರದರ್ಶನ ಕಂಡು ಮೆಚ್ಚುಗೆ ಪಡೆದಿದ್ದಲ್ಲದೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕಂಡಿತು. ನಂತರ ಚೀನಾದ ಪಿಂಗ್ಯಾವೊ ರೋಸಲಿನಿ ಹೆಸರಿನಲ್ಲಿ ಕೊಡುವ ಪ್ರದರ್ಶನಕಂಡಿತು. ಈ ಚಿತ್ರೋತ್ಸವದಲ್ಲಿ ರಾಬರ್ಟ್ ನಟೇಶ್ ಹೆಗಡೆ ಪಡೆದುಕೊಂಡರು. 'ಅತ್ಯುತ್ತಮ ನಿರ್ದೇಶಕ' ಪ್ರಶಸ್ತಿಯನ್ನೂ ಪಾಲ್ಗೊಂಡು ಪ್ರಶಸ್ತಿಗಳನ್ನೂ ಫ್ರಾನ್ಸ್ ಸೇರಿದಂತೆ ಹಲವು ಚಿತ್ರೋತ್ಸವಗಳಲ್ಲಿ ತೆರೆಕಾಣಲು ಸೂಕ್ತ ಸಮಯಕ್ಕಾಗಿ ಗೆದ್ದುಕೊಂಡಿರುವ 'ಪೆದ್ರೊ' ಚಿತ್ರಮಂದಿರಗಳಲ್ಲಿಯೂ ಎದುರು ನೋಡುತ್ತಿದ್ದಾನೆ.

## ಅಮೃತಮತಿ

ಹರಿಪ್ರಿಯಾ ಮತ್ತು ಕಿಶೋರ್ ಬರಗೂರು ರಾಮಚಂದ್ರಪ್ಪ ನಿರ್ದೇಶನದ, 2020ರಲ್ಲಿಯೇ ಹಲವು ದೇಶಗಳ ಮುಖ್ಯಪಾತ್ರದಲ್ಲಿ ನಟಿಸಿರುವ 'ಅಮೃತಮತಿ' ಸಿನಿಮಾ ಗೆದ್ದುಕೊಂಡಿತ್ತು. 'ಅಮೃತಮತಿ'ಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು ಪ್ರಶಸ್ತಿಗಳನ್ನೂ ಆಸ್ಟ್ರಿಯಾ, ಅಟ್ಲಾಂಟಾ, ಲಾಸ್ ಚಿತ್ರೋತ್ಸವದ ಓಟ ಈ ವರ್ಷವೂ ಮುಂದುವರಿಯಿತು. ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿತು. ಏಂಜಲೀಸ್, ನೋಯ್ಡಾ ಸೇರಿದಂತೆ ಹಲವು

## ಡೊಳ್ಳು

ಪರಿಚಿತರಿದ್ದ ಪವನ್ ಒಡೆಯರ್ ನಿರ್ಮಾಣ ನಟನಾಗಿ, ನಿರ್ದೇಶಕನಾಗಿ ಪ್ರೇಕ್ಷಕರಿಗೆ ನಿರ್ದೇಶಿಸಿದ ಈ ಸಿನಿಮಾ 20ನೇ ಮಾಡಿದ ಸಿನಿಮಾ 'ಡೊಳ್ಳು'. ಸಾಗರ್ ಪುರಾಣಿಕ್ ಮೂಲಕ ಸುದ್ದಿ ಮಾಡಿತು. ಢಾಕಾ ಫಿಲ್ಮ್ ಫೆಸ್ಟಿವಲ್‌ನಲ್ಲಿ ಪ್ರದರ್ಶನಕ್ಕೆ ಆಯ್ಕೆ ಆಗುವ ಈ ಸಿನಿಮಾ ಆಯ್ಕೆಯಾಗಿ, ನಂತರ ಗೋವಾ ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೂ ನಾಮನಿರ್ದೇಶನಗೊಂಡಿತ್ತು. ಈ ಸಿನಿಮಾ 'ನಿರ್ದೇಶಕರ ಚೊಚ್ಚಲ ಚಿತ್ರ' ವಿಭಾಗದಲ್ಲಿ ಗಣೇಶ್ ಹೆಗಡೆ ನಿರ್ದೇಶನದ ಜೊತೆಗೆ ಮಂಸೋರೆ ನಿರ್ದೇಶನದ 'ಆ್ಯಕ್ಟ್ 1947', 'ತಲೆದಂಡ' ಸಿನಿಮಾಗಳೂ ಗೋವಾ 'ನೀಲಿ ಹಕ್ಕಿ', ಪ್ರವೀಣ್ ಕೃಪಾಕರ್ ನಿರ್ದೇಶನದ ಚಿತ್ರೋತ್ಸವದಲ್ಲಿ ಪ್ರದರ್ಶನ ಕಂಡವು.

ಮಧ್ಯಂತರವೂ ಇಲ್ಲದೆ ಸಮರ್ಥವಾಗಿ ತೋರಿಸಲು ಯಶಸ್ವಿಯಾಯಿತು.

'ಸಲಗ' ಅಬ್ಬರ ತಗ್ಗುತ್ತಿದ್ದ ಹಾಗೆಯೇ 'ಭಜರಂಗಿ' ಎರಡನೇ ಅವತಾರವನ್ನು ಭರ್ಜರಿಯಾಗಿಯೇ ಎತ್ತಲು ಸರ್ವಸನ್ನದ್ಧನಾಗಿದ್ದ. ಶಿವರಾಜ್‌ಕುಮಾರ್ ಅಭಿನಯದ, ಎ. ಹರ್ಷ ನಿರ್ದೇಶನದ 'ಭಜರಂಗಿ 2' ಸಿನಿಮಾ ಅಕ್ಟೋಬರ್ 29ಕ್ಕೆ ಬಿಡುಗಡೆಯಾಗಿತ್ತು. ಆದರೆ ಅಂದು ಮಧ್ಯಾಹ್ನದ ಹೊತ್ತಿಗೆ ಬರೀ ಚಿತ್ರರಂಗವಷ್ಟೇ ಅಲ್ಲ, ಇಡೀ ಕನ್ನಡ ನಾಡು, ದೇಶವನ್ನೇ ದುಃಖದ ಮಡುವಲ್ಲಿ ಮುಳುಗಿಸುವ ಸುದ್ದಿಯೊಂದು ಹೊರಬಿದ್ದಿತ್ತು. ಅದು ಪುನೀತ್‌ರಾಜ್‌ಕುಮಾರ್ ಸಾವಿನ ಸುದ್ದಿ. ಪುನೀತ್ ಸಾವಿನಲ್ಲಿ, ದುಃಖದ ಪ್ರವಾಹದಲ್ಲಿ ಇಡೀ ಕರ್ನಾಟಕವೇ ಮುಳುಗಿಹೋಗಿತ್ತು. 'ಭಜರಂಗಿ 2' ಸಿನಿಮಾ ಕೂಡ ಅದರಲ್ಲಿಯೇ ಕೊಚ್ಚಿಕೊಂಡು ಹೋಯಿತು.

ನವೆಂಬರ್ ತಿಂಗಳಲ್ಲಿ ಅತಿ ಹೆಚ್ಚು ಎಂದರೆ ಆರು ಸಿನಿಮಾಗಳು 19ನೇ ತಾರೀಖಿನಂದು ಬಿಡುಗಡೆಯಾದವು. ಅವುಗಳಲ್ಲಿ ಮೂರು ಸಿನಿಮಾಗಳು ಬಿಡುಗಡೆಗೆ ಮುನ್ನವೇ ಸದ್ದುಮಾಡತೊಡಗಿದ್ದವು. ರಮೇಶ್ ಅರವಿಂದ್ ನಟಿಸಿ – ನಿರ್ದೇಶಿಸಿದ್ದ '100', ಮನೋಹರ್ ರವಿಚಂದ್ರನ್ ಅಭಿನಯದ, ಭರತ್ ಎಸ್. ನಾವುಂದ ನಿರ್ದೇಶನದ 'ಮುಗಿಲ್ ಪೇಟೆ' ಮತ್ತು ಈ ಎರಡು ಸಿನಿಮಾಗಳಿಗಿಂತ ತುಸು ಹೆಚ್ಚೇ ಹವಾ ಹುಟ್ಟಿಸಿದ್ದ ರಾಜ್ ಶೆಟ್ಟಿ ನಿರ್ದೇಶಿಸಿ ನಟಿಸಿದ್ದ 'ಗರುಡ ಗಮನ ವೃಷಭ ವಾಹನ' – ಈ ಮೂರು ಸಿನಿಮಾಗಳು ಜನರಲ್ಲಿ ನಿರೀಕ್ಷೆ ಹುಟ್ಟಿಸಿದ್ದವು. 'ಮುಗಿಲ್ ಪೇಟೆ' ಕಡೆಗೆ ಜನ ಹೊರಳಲಿಲ್ಲ, '100' ಸಿನಿಮಾ ಬಗ್ಗೆ ಮೆಚ್ಚುಗೆಯ ಮಾತುಗಳು ಕೇಳಿಬಂದವಾದರೂ ಪ್ರೇಕ್ಷಕರ ಗಮನ ಸೆಳೆಯಲಿಲ್ಲ. ಯಾಕೆಂದರೆ ಜನರ ಗಮನ ಮತ್ತೊಂದು ದಿಕ್ಕಿನಲ್ಲಿ ದೊಡ್ಡದಾಗಿ ಸದ್ದು ಮಾಡುತ್ತ ಬರುತ್ತಿದ್ದ ಹುಲಿಕುಣಿತದ ಮೇಲಿತ್ತು.

### 'ಗರುಡ' ಆಗಮನ

ರಾಜ್ ಶೆಟ್ಟಿ, ರಿಷಭ್ ಶೆಟ್ಟಿ ಜುಗಲಬಂದಿಯ 'ಗರುಡ ಗಮನ ವೃಷಭ ವಾಹನ' ಸಿನಿಮಾ ಬಿಡುಗಡೆಯ ಚಿತ್ರಮಂದಿರಗಳ ಪಟ್ಟಿ ತುಂಬ ಉದ್ದವೇನೂ ಇರಲಿಲ್ಲ. ಒಂದಿಷ್ಟು ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡಿ,

